ಶ್ರೀ ಜಿ.ಹೆಚ್. ಪಟೇಲ್:— ಈ ವರ್ಷದ ಬಜೆಟರಿ ಪ್ರಾವಿಜನ್ ಏನು ಮಾಡಿದ್ದೇವೆ ಅದನ್ನು ಬಿಡುಗಡೆ ಮಾಡಲೇಬೇಕು.

ಶ್ರೀ ಕೆ.ಎಸ್. ಈಶ್ವರಪ್ಪ:— ಮಾನ್ಯ ಅಧ್ಯಕ್ಷರೇ, 73 ವಿಧಾನ ಸಭಾ ಕ್ಷೇತ್ರದಲ್ಲಿ ನಾವು ಮುಖ ತೋರಿಸುವಂತಹ ಸ್ಥಿತಿಯಲ್ಲಿ ಇಲ್ಲ. ಈ ಸರ್ಕಾರ ರಾಜ್ಯದ ಜನತೆಗೆ ದ್ರೋಹ ಮಾಡಿದ್ದಾರೆ. ರಾಜ್ಯದ ಜನತೆಯ ಬಗ್ಗೆ ಇವರು ಇಷ್ಟು ತಾತ್ಸಾರವಾಗಿ ಮಾತನಾಡುತ್ತಿರುವುದನ್ನು ಪ್ರತಿಭಟನೆ ಮಾಡಿ ನಾವು ಸಭಾತ್ಯಾಗ ಮಾಡುತ್ತೇವೆ.

(ಬಿಜೆಪಿ ಮಾನ್ಯ ಸದಸ್ಯರುಗಳು ಸಭಾತ್ಯಾಗ ಮಾಡಿದರು)

ಕಾವೇರಿ ಏತ ನೀರಾವರಿ ನಿಗಮದಿಂದ ಮಹಿಸಿಕೊಂಡಿರುವ ಕಾಮಗಾರಿಗಳು ವಿಳಂಬವಾಗುತ್ತಿರುವುದು.

8(333) ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು):— ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕಾವೇರಿ ಏತ ನೀರಾವರಿ ನಿಗಮದಿಂದ ಮಹಿಸಿಕೊಂಡಿರುವ ಕಾಮಗಾರಿಗಳ ಸಂಖ್ಯೆ ಎಷ್ಟು;

ಆ) ಅವು ಯಾವ ಹಂತದಲ್ಲಿವೆ;

ಇ) ಕಾಮಗಾರಿಗಳು ವಿಳಂಬವಾಗಲು ಕಾರಣಗಳೇನು?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು):—

ಅ) ಒಟ್ಟು 18

ಆ) ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಇ) ವಿಳಂಬಕ್ಕೆ ಕಾರಣಗಳು

ಅ) ಸಣ್ಣ ನೀರಾವರಿ ಇಲಾಖೆಯ ಕಛೇರಿ ಮತ್ತು ಸಿಬ್ಬಂದಿಯ ಆಡಳಿತ ವಿವಿಧ ಇಲಾಖೆಗಳಲ್ಲಿ ಹಂಚಿದ್ದು, ಈಗತಾನೆ ಇಲಾಖೆ ಪ್ರತ್ಯೇಕ ಗೊಂಡಿರುವುದು ವಿಳಂಬವಾಗಿರುವುದಕ್ಕೆ ಮುಖ್ಯ ಕಾರಣ.

ಬ) ಯೋಜನೆಗೆ ಬೇಕಾದ ಹಣವನ್ನು ಆಯವ್ಯಯದಲ್ಲಿ ಒದಗಿಸಿರುವುದರಿಂದ

ಇ) ಅಂದಾಜು ಪಟ್ಟಿ ತಯಾರಿಸಲಾಗಿದೆ. ನೀರಿನ ಲಭ್ಯತೆ, ಗುತ್ತಿಗೆ ಕರಾರಿನ ತೊಡಕುಗಳು, ಭೂಸ್ವಾಧೀನ, ತಾಂತ್ರಿಕ ಸಮಿತಿಯ ಶಿಫಾರಸ್ಸು, ಕೆ.ಇ.ಜಿ.ಯಿಂದ ವಿದ್ಯುಚ್ಛಕ್ತಿ ಸರಬರಾಜು ಇತ್ಯಾದಿಗಳನ್ನು ಪಡೆಯುವಲ್ಲಿ ವಿಳಂಬ.

ಅನುಬಂಧ

ಕ್ರ ಸಂ.	ಕಾಮಗಾರಿಯ ಹೆಸರು	ಅಂದಾಜು ಮೆಚ್ಚ ಲಕ್ಷ ರೂ.ಗಳಲ್ಲಿ	ಅಚ್ಚುಕಟ್ಟು ಹೆ.ಗಳಲ್ಲಿ	1998-99 ಸಾಲಿನ ಅನುದಾನ ಲಕ್ಷ ರೂ.ಗಳಲ್ಲಿ	1:99ರವರೆಗಿನ ಮೆಚ್ಚ ಲಕ್ಷ ರೂ.ಗಳಲ್ಲಿ	ಪ್ರಸಕ್ತ ಹಂತ
1	2	3	4	5	6	7
	<u>ಮೈಸೂರು ಜಿಲ್ಲೆ :</u>					
1.	ತಲಕಾಡು ಎತ ನೀರಾವರಿ ಯೋಜನೆ	49.00	189.00	0.50	6.82	ಉಳಿಕೆ ಸಿವಿಲ್ ಕಾಮಗಾರಿಗೆ ಟೆಂಡರ್ ಕರೆಯಲಾಗಿದೆ.
2.	ಮೇದಿನಿ ಎತ ನೀರಾವರಿ ಯೋಜನೆ	90.00	405	15.00	40.22	ಪ್ರಗತಿಯಲ್ಲಿದೆ.
3.	ಮುಡುಕುತೊರೆ ಎತ ನೀರಾವರಿ 2ನೇ ಹಂತ	280.00	880	5.00	22.34	ಉಳಿಕೆ ಸಿವಿಲ್ ಕಾಮಗಾರಿಗೆ ಟೆಂಡರ್ ಕರೆಯಲಾಗಿದೆ.
4.	ಚಿಕ್ಕನಂದಿ ಎತ ನೀರಾವರಿ ಯೋಜನೆ	35.00	359	5.00	7.05	ಉಳಿಕೆ ಸಿವಿಲ್ ಕಾಮಗಾರಿಗೆ ಕರಡು ಟೆಂಡರ್ ತಯಾರಿಸಲಾಗುತ್ತಿದೆ.
5.	ಬೀರಂಬಳ್ಳಿ ಎತ ನೀರಾವರಿ ಯೋಜನೆ	22.00	272	10.00	25.98	ಸಿವಿಲ್ ಕಾಮಗಾರಿ ಪೂರ್ಣಗೊಂಡಿದ್ದು ವಿದ್ಯುತ್ ಕಾಮಗಾರಿ ಕೆಲಸ ಪ್ರಗತಿಯಲ್ಲಿದೆ.
	<u>ಮಂಡ್ಯ ಜಿಲ್ಲೆ :</u>					
6.	ಕಾಡುಕೊತ್ತನಹಳ್ಳಿ ಎತ ನೀರಾವರಿ ಯೋಜನೆ	5.00	47	0.10	7.48	ಸಿವಿಲ್ ಕಾಮಗಾರಿ ಪೂರ್ಣಗೊಂಡಿದ್ದು ಪೈಪ್ ಜಾಯಿಂಟ್ ಕೆಲಸ

1	2	3	4	5	6	7
7.	ಮಲ್ಲಿಕ್ಯಾತನ ಹಳ್ಳಿ ಎತ ನೀರಾವರಿ ಯೋಜನೆ	30.00	149	15.00	73.43	ಸಿವಿಲ್ ಕಾಮಗಾರಿ ಮುಗಿದಿದೆ. ವಿದ್ಯುತ್ ಕಾಮಗಾರಿ ಟೆಂಡರ್ ಅನುಮೋದನೆಯಾಗಬೇಕಾಗಿದೆ.
8.	ಅತಗೂರು ಮಾಚಹಳ್ಳಿ ಎ. ನೀ. ಯೋಜನೆ	29.00	162	0.10	9.47	ಉಳಿಕೆ ಕಾಮಗಾರಿಗೆ ಟೆಂಡರ್ ಕರೆಯಲಾಗಿದೆ.
9.	ಹುಲಿಕೆರೆ ಎತ ನೀರಾವರಿ ಯೋಜನೆ	—	—	—	—	ಭಾರಿ ನೀರಾವರಿ ಇಲಾಖೆಗೆ ವರ್ಗಾಯಿಸಲಾಗಿದೆ.
10.	ನಂಜಾಪುರ ಎತ ನೀರಾವರಿ ಯೋಜನೆ	25.00	132	0.10	4.47	ಕರಡು ಟೆಂಡರ್ ತಯಾರಿಕೆ ಹಂತದಲ್ಲಿದೆ.
11.	ಜಕ್ಕೋನಹಳ್ಳಿ ಎತ ನೀರಾವರಿ ಯೋಜನೆ	16.25	138	0.42	0.54	ಭಾರಿ ನೀರಾವರಿ ಇಲಾಖೆಗೆ ವರ್ಗಾಯಿಸಲಾಗಿದೆ.
	<u>ಹಾಸನ ಜಿಲ್ಲೆ:</u>					
12.	ಅರಕಲಗೂಡು ತಾಲ್ಲೂಕು ಹಾಡನೂರು ಎತ ನೀರಾವರಿ ಯೋಜನೆ	14.64	81	0.10	4.41	ಉಳಿಕೆ ಕಾಮಗಾರಿಗಳಿಗೆ ಅಂದಾಜು ತಯಾರಿಸಲಾಗಿದ್ದು ಪರಿಶೀಲನೆಯಲ್ಲಿದೆ.
	<u>ಹಾಸನ ಜಿಲ್ಲೆ:</u>					
13.	ಶೃಂಗೇರಿ ತಾಲ್ಲೂಕು ನೆಮ್ಮಾರು ಎತ ನೀರಾವರಿ ಯೋಜನೆ	14.75	61.30	5.00	16.76	ಸಿವಿಲ್ ಮತ್ತು ವಿದ್ಯುತ್ ಕಾಮಗಾರಿಗಳು ಮುಗಿಯುವ ಹಂತದಲ್ಲಿದೆ.

1	2	3	4	5	6	7
14.	ಕೊಪ್ಪ ತಾಲ್ಲೂಕು ಬಂಡಿಗಡಿ ಎತ ನೀರಾವರಿ ಯೋಜನೆ	13.50 21.30	66.88	2.53	21.75	ಸಿವಿಲ್ ಮತ್ತು ವಿದ್ಯುತ್ ಕಾಮಗಾರಿಗಳು ಮುಗಿಯುವ ಹಂತದಲ್ಲಿದೆ.
15.	ಕೊಪ್ಪ ತಾಲ್ಲೂಕು ಬೊಮ್ಮಲಾಪುರ ಎತ ನೀರಾವರಿ ಯೋಜನೆ	8.10 16.50	44.50	2.00	17.31	ಭೂಸ್ವಾಧೀನ ತಕರಾರಿನಿಂದ ವಿಳಂಬವಾಗಿದೆ.
	ಬೆಂಗಳೂರು ಜಿಲ್ಲೆ:					
16.	ಬೆಂಗಳೂರು ದಕ್ಷಿಣ ತಾ: ಕೆ. ಗೊಲ್ಲಹಳ್ಳಿ ಹತ್ತಿರ ಎತ ನೀರಾವರಿ ಯೋಜನೆ	41.00	290	0.50	35.83	ಮುಗಿಯುವ ಹಂತದಲ್ಲಿದೆ.
	ದಕ್ಷಿಣ ಕನ್ನಡ ಜಿಲ್ಲೆ:					
17.	ಕರಮರಗುಂಡಿ ಎತ ನೀರಾವರಿ ಯೋಜನೆ	19.65	—	—	0.54	ನೀರಿನ ಲಭ್ಯತೆ ಇಲ್ಲದಿರುವುದರಿಂದ ಕೈಬಿಡಲಾಗಿದೆ.
	ಕೊಡಗು ಜಿಲ್ಲೆ:					
17.	ವಿರಾಜಪೇಟೆ ತಾ : ಕೊಟ್ಟಗೆರೆ ಎತ ನೀರಾವರಿ ಯೋಜನೆ	19.50	—	0.02	1.87	ಪರಿಶೀಲಿಸಿ ಕೈಗೆತ್ತಿಕೊಳ್ಳಬೇಕಾಗಿದೆ.

ಶ್ರೀ ಎ.ಟಿ. ರಾಮಸ್ವಾಮಿ :— ಮಾನ್ಯ ಅಧ್ಯಕ್ಷರೇ, ಕಾವೇರಿ ಏತ ನೀರಾವರಿ ನಿಗಮದಿಂದ ಕೆಲವು ಏತ ನೀರಾವರಿ ಕಾಮಗಾರಿಗಳನ್ನು ಸಣ್ಣ ನೀರಾವರಿ ಇಲಾಖೆ ವಹಿಸಿಕೊಂಡು ಅನುಷ್ಠಾನ ಮಾಡಬೇಕಾಗಿತ್ತು. ಅವು ಏಕೆ ವಿಳಂಬವಾಗಿದೆ ಎಂದು ನಾನು ಪ್ರಶ್ನೆ ಕೇಳಿದರೆ ಈ ಇಲಾಖೆ ಪ್ರತ್ಯೇಕಗೊಂಡಿರುವುದರಿಂದ ವಿಳಂಬವಾಗಿದೆ ಎನ್ನತಕ್ಕಂಥ ಒಂದು ಕಾರಣವನ್ನು ಕೊಟ್ಟಿದ್ದಾರೆ. ಈ ಇಲಾಖೆ ಪ್ರತ್ಯೇಕಗೊಂಡು ಎಷ್ಟು ವರ್ಷವಾಯಿತು? ಈ ಏತ ನೀರಾವರಿ ಕಾಮಗಾರಿಗಳನ್ನು ಮತ್ತೆ ನೀವು ವಹಿಸಿಕೊಂಡು ಎಷ್ಟು ವರ್ಷವಾಯಿತು? ಅದನ್ನು ತಿಳಿಸಿ ಮತ್ತು ಯೋಜನೆಗೆ ಬೇಕಾದ ಹಣವನ್ನು ಸಹ ಆಯವ್ಯಯದಲ್ಲಿ ಒದಗಿಸಿಲ್ಲ, ಅದಕ್ಕೂ ಕೂಡ ವಿಳಂಬವಾಗಿದೆ ಎಂದು ಹೇಳಿದ್ದೀರಿ. ಸರ್ಕಾರ ಸಣ್ಣ ನೀರಾವರಿ ಇಲಾಖೆ ಬಗ್ಗೆ ಆಸಕ್ತಿ ವಹಿಸುತ್ತಿಲ್ಲ ಎನ್ನುವುದು ಇದರಿಂದ ಗೊತ್ತಾಗುತ್ತದೆ. ಇದು ನಿಜವೇ? ಹಣಕಾಸಿನ ತೊಂದರೆ ಈ ಸರ್ಕಾರಕ್ಕೆ ಇದೆಯೇ?

ಶ್ರೀ ತಿಪ್ಪೇಸ್ವಾಮಿ (ಮಾನ್ಯ ಸಣ್ಣ ನೀರಾವರಿ ಸಚಿವರು) :— ಮಾನ್ಯ ಅಧ್ಯಕ್ಷರೇ, ಈ ಕಾವೇರಿ ಬೇಸಿನ್ ಕಾಮಗಾರಿಗಳನ್ನು ನಾವು 1994 ರಲ್ಲಿ ವಹಿಸಿಕೊಂಡಿದ್ದೇವೆ. ಪ್ರಾಮಾಣಿಕವಾಗಿ ಹೇಳಬೇಕೆಂದರೆ ನಾವು ಎರಡು ಕಾಮಗಾರಿಗಳನ್ನು ಬೃಹತ್ ನೀರಾವರಿ ಇಲಾಖೆಗೆ ಬಿಟ್ಟು ಕೊಟ್ಟಿದ್ದೇವೆ. ಇನ್ನು ಎರಡು ಕಾಮಗಾರಿಗಳನ್ನು ನೀರಿನ ಲಭ್ಯತೆ ಇಲ್ಲ ಎನ್ನುವ ಕಾರಣಕ್ಕೆ ಬಿಟ್ಟಿದ್ದೇವೆ. ನಿಜವಾಗಿ ಹೇಳಬೇಕೆಂದರೆ ಹಣದ ಕೊರತೆಯಿಂದ ನಾವು ಸ್ವಲ್ಪ ಉದಾಸೀನ ಮಾಡಿದ್ದೇವೆ. ಈ ವರ್ಷ ಆದಷ್ಟು ಆದ್ಯತೆ ಮೇರೆಗೆ ಇದಕ್ಕೆ ಒತ್ತು ಕೊಡುತ್ತೇನೆ ಎನ್ನುವ ಮಾತನ್ನು ಮಾನ್ಯ ಸದಸ್ಯರಿಗೆ ನಾನು ತಿಳಿಸುತ್ತೇನೆ.

ಅಧ್ಯಕ್ಷರು :— ಹಣ ಇಲ್ಲದೇ ಇರುವುದರಿಂದ ನಿಧಾನವಾಗಿದೆ ಎನ್ನುವುದನ್ನು ಅವರು ಅಡ್ಮಿಟ್ ಮಾಡಿಕೊಂಡಿದ್ದಾರಲ್ಲಾ.

ಶ್ರೀ ಕಾಗೋಡು ತಿಮ್ಮಪ್ಪ :— ಸಣ್ಣ ನೀರಾವರಿ ಇಲಾಖೆಯ ಕಾಮಗಾರಿಗಳನ್ನು ದೊಡ್ಡ ನೀರಾವರಿ ಇಲಾಖೆಗೆ ವರ್ಗ ಮಾಡಲು ಕಾರಣಗಳು ಏನು?

ಶ್ರೀ ತಿಪ್ಪೇಸ್ವಾಮಿ :— ಕೆಲವು ಕಾಮಗಾರಿಗಳನ್ನು ನಾವು ದೊಡ್ಡ ನೀರಾವರಿ ಇಲಾಖೆಗೆ ಬಿಟ್ಟುಕೊಟ್ಟಿರುವುದು ನಿಜ. ಕಾರಣ ಇಷ್ಟೇ; ಹಣದ ಲಭ್ಯತೆ ಇಲ್ಲದೇ ಇರುವುದರಿಂದ ಕೊಟ್ಟಿದ್ದೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ತಮಗೆ ಹಣ ಕೊಡಬೇಕೆನ್ನುವ ಮನಸ್ಸು ಇದ್ದರೆ ಇಲ್ಲಿಯೇ ಹಣ ಕೊಡಬಹುದಿತ್ತು.

ಶ್ರೀ ಜೆ.ಹೆಚ್. ಪಟೇಲ್:— ಈಗ ಎರಡು ಕಾರ್ಪೊರೇಷನ್ ಮಾಡಿ ಬಾಂಡ್ಸ್ ರೈಸ್ ಮಾಡುತ್ತಿದ್ದೇವೆ. ಅದು ಮೈನರ್ ಇರಿಗೇಷನ್‌ಗೆ ಬರುವುದಿಲ್ಲ. ಕರ್ನಾಟಕ ನೀರಾವರಿ ನಿಗಮ ಒಂದು. ಕೃಷ್ಣಾ ಜಲಭಾಗ್ಯ ನಿಗಮ ಒಂದು. ಇವುಗಳನ್ನು ನಾವು ಟೆಕ್ನಿಕಲ್‌ಆಗಿ ಹ್ಯಾಂಡ್‌ಓವರ್ ಮಾಡದೇ ಇದ್ದರೆ ಅವರು ಹಣ ಖರ್ಚು ಮಾಡುವುದಕ್ಕೆ ಆಗುವುದಿಲ್ಲ. ಅದಕ್ಕೋಸ್ಕರ ಕೊಟ್ಟಿದ್ದೇವೆ. ತಾವು ಎನು ಹೇಳಿದಿರಿ ಅದೇ ಹಣ ಇವರಿಗೆ ಕೊಡಬಹುದಿತ್ತು ಎಂದು ಆ ರೀತಿ ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ:— ಮಾನ್ಯ ಅಧ್ಯಕ್ಷರೇ, ಕೃಷ್ಣಾ ಜಲಭಾಗ್ಯ ನಿಗಮದ ಉದ್ದೇಶವಾಗಲಿ ಅಥವಾ ಇನ್ಯಾವುದೇ ನಿಗಮದ ಉದ್ದೇಶವಾಗಲಿ ನಮ್ಮ ಬಜೆಟರಿ ಪ್ರಾವಿಷನ್ ಏನು ಇರುತ್ತದೆಯೋ ಅದಕ್ಕೆ ಸಪ್ಲಿಮೆಂಟ್ ಮಾಡುವುದಕೋಸ್ಕರ ಕಾರ್ಪೊರೇಷನ್ ಮಾಡಿದ್ದೇ ಹೊರತಾಗಿ ಇದು ಬರೀ ಕಾರ್ಪೊರೇಷನ್ ಮೇಲೆ ಅವಲಂಬಿತವಾಗಿದ್ದು ಹೊರಗಿನಿಂದ ಏನು ಹಣ ಬರುತ್ತದೆ ಅದರಿಂದಲೇ ಮಡಾತಕ್ಕಂಥಾದ್ದು ಅಲ್ಲ. ಅನೇಕ ಸಲ ಹಿಂದೆಯು ಕೂಡ ಯುಕಿಪಿಯಲ್ಲಿ 200-300 ಕೋಟಿ ರೂಪಾಯಿಗಳು ಬಜೆಟರಿ ಪ್ರಾವಿಷನ್ ಪ್ಲಸ್ ಕೃಷ್ಣಾ ಜಲಭಾಗ್ಯ ನಿಗಮದ್ದು.

ಶ್ರೀ ಜೆ.ಎಚ್. ಪಟೇಲ್:— ಬಜೆಟರಿ ಪ್ರಾವಿಷನ್ ನಮಗೆ ಬೇಕಾದ 10 ಪರ್ಸೆಂಟ್ ಇಲ್ಲ. ಈಗ ಏನು ನಾವು 1600 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ, ನಮ್ಮ ಬಜೆಟರಿ ಪ್ರಾವಿಷನ್ 300-350 ಕೋಟಿ ರೂಪಾಯಿಗಳು ಮಾತ್ರ. ಇನ್ನು ಉಳಿದಿದ್ದು ಎಲ್ಲಾ ಸಾಲ ತೆಗೆದುಕೊಂಡು ಬಂದು ಮಾಡಿರುವ ಕೆಲಸ. ಈ ಕೆಲಸಗಳು ಏನು ಮೈನರ್ ಇರಿಗೇಷನ್‌ನಲ್ಲಿ ನಿಂತಿವೆ, ಆ ದುಡ್ಡು ಬಳಸಲಿ ಎಂದು ಬಿಟ್ಟುಕೊಟ್ಟಿದ್ದಾರೆ. ಇಲ್ಲದಿದ್ದರೆ ಅವರಿಗೇನು ಕೆಲಸ ಮಾಡಿಸಲು ಬರುವುದಿಲ್ಲ ಎಂದು ಬಿಟ್ಟು ಕೊಟ್ಟಿಲ್ಲ. ಇವರಿಗೂ ದುಡ್ಡು ಕೊಟ್ಟರೆ ಕೆಲಸ ಮಾಡಿಸುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ:— ಅದೇ ಉದ್ದೇಶವಾಗಿದ್ದರೆ ಇವತ್ತು ಹಣ ಇಲ್ಲದೆ ಬಹಳಷ್ಟು ಕಾಮಗಾರಿಗಳು ನಿಂತಿವೆ. ಅವೆಲ್ಲವನ್ನೂ ಅದಕ್ಕೆ ವಹಿಸಿಕೊಟ್ಟುಬಿಡಿ ಹಾಗಾದರೆ.

ಶ್ರೀ ಎಟಿ ರಾಮಸ್ವಾಮಿ:— ಮಾನ್ಯ ಅಧ್ಯಕ್ಷರೇ, ಈಗ ಎನಾಗಿದೆ ಕೆಲವು ಏತ ನೀರಾವರಿ ಕೆಲಸಗಳು ಟೆಂಡರ್ ಕರೆದು ಪ್ರಗತಿಯಲ್ಲಿ ಇದ್ದವುಗಳು ನಿಂತು ಹೋಗಿವೆ. ಹತ್ತಾರು ವರ್ಷಗಳಿಂದ ನಿಂತು ಹೋಗಿವೆ. ಮುಕ್ಕಾಲು ಭಾಗದ ಕೆಲವು ಕೆಲಸಗಳು ಆಗಿವೆ, ಅರ್ಧ ಭಾಗದ ಕೆಲವು ಕೆಲಸಗಳು ಆಗಿವೆ. ಇದು ಸರ್ಕಾರಕ್ಕೆ ಶೋಭೆ ತರತಕ್ಕಂಥಾದ್ದಲ್ಲ

ಶ್ರೀ ತಿಪ್ಪೇಸ್ವಾಮಿ :— ಆಧ್ಯತೆ ಮೇರೆಗೆ ನಾನು ಆ ಕೆಲಸವನ್ನು ಕೈಗೆತ್ತಿಕೊಳ್ಳುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ (ಭಾರಿ ನೀರಾವರಿ ಸಚಿವರು) :— ಮಾನ್ಯ ಅಧ್ಯಕ್ಷರೇ, ಮಾನ್ಯ ಕಾಗೋಡು ತಿಮ್ಮಪ್ಪನವರು ಒಂದು ವಿಚಾರ ಹೇಳಿದರು. ಬೃಹತ್ ನೀರಾವರಿ ಇಲಾಖೆಗೆ ಏಕೆ ಆ ಕಾಮಗಾರಿಗಳನ್ನು ವಹಿಸಿಕೊಟ್ಟಿದ್ದೀರಿ ಎಂದು. ಸಣ್ಣ ನೀರಾವರಿ ಇಲಾಖೆ ಅಂದರೆ 5 ಸಾವಿರ ಎಕರೆಗಳಿಗಿಂತ ಕೆಳಗಡೆ ಇರುವಂತಹ ಪ್ರಾಜೆಕ್ಟ್‌ಗಳಿಗೆ ಸಣ್ಣ ನೀರಾವರಿ ಎಂದು ಕರೆಯುತ್ತೇವೆ. 5 ಸಾವಿರದಿಂದ 10 ಸಾವಿರದ ಒಳಗೆ ಬರತಕ್ಕಂಥ ಅಚ್ಚುಕಟ್ಟು ಪ್ರದೇಶಗಳಿಗೆ ಮಧ್ಯಮ ನೀರಾವರಿ ಅಚ್ಚುಕಟ್ಟು ಪ್ರದೇಶ ಎಂದು ಕರೆಯುತ್ತೇವೆ. 10 ಸಾವಿರಕ್ಕೂ ಮೇಲ್ಪಟ್ಟು ಬರತಕ್ಕಂಥ ಅಚ್ಚುಕಟ್ಟು ಪ್ರದೇಶಗಳಿಗೆ ಬೃಹತ್ ನೀರಾವರಿ ಎಂದು ಕರೆಯುತ್ತೇವೆ. ಆ ಕೆಟಗರಿಯಲ್ಲಿ ಯಾವ ಯಾವ ಏತ ನೀರಾವರಿ ಎಷ್ಟೆಷ್ಟು ಅಚ್ಚುಕಟ್ಟು ಇದೆ ಎನ್ನತಕ್ಕಂಥ ಆಧಾರ ಇಟ್ಟುಕೊಂಡು ಸಣ್ಣ ನೀರಾವರಿಗೆ, ಮಧ್ಯಮ ನೀರಾವರಿಗೆ, ಬೃಹತ್ ನೀರಾವರಿಗೆ ಬದಲಾಯಿಸಿದ್ದೇವೆಯೇ ವಿನಹ: ದೊಡ್ಡವರು ಎಂದು ಏನೂ ಬದಲಾಯಿಸುಕೊಂಡಿಲ್ಲ. ಅದೆಲ್ಲಾ ನಿಮ್ಮ ಹತ್ತಿ. ನಮ್ಮಲ್ಲಿ ಇಲ್ಲ.

ಹೇಮಾವತಿ ತುಮಕೂರು ನಾಲಾ ವಲಯದ ಕಾಮಗಾರಿಗಳ ಪ್ರಗತಿ.

09(146) ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) :— ಮಾನ್ಯ ಬೃಹತ್ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹೇಮಾವತಿ ತುಮಕೂರು ನಾಲಾ ವಲಯದ ಕಾಮಗಾರಿಗಳಿಗೆ ಕಳೆದ ಆರು ತಿಂಗಳಿಂದ ಖರ್ಚು ಮಾಡಿರುವ ಹಣವೆಷ್ಟು;

ಆ) ಸದರಿ ಅವಧಿಯಲ್ಲಿ ಸಾಧಿಸಿರುವ ಕಾಮಗಾರಿಯ ಪ್ರಗತಿ ಏನು (ವಿವರಗಳನ್ನು ನೀಡುವುದು)?

ಶ್ರೀ ಕೆ.ಎನ್. ನಾಗೇಗೌಡ ಬೃಹತ್ (ನೀರಾವರಿ ಸಚಿವರು) :—

ಅ) ರೂ.37.56 ಕೋಟಿಗಳು.

ಆ) ವೈ ಅಲೈನ್‌ಮೆಂಟ್ ಲೈನಿಂಗ್ ಕಾಮಗಾರಿಗಳು ಪ್ರಗತಿಯಲ್ಲಿ ಇದ್ದು 1 ಕಿ.ಮೀ ಲೈನಿಂಗ್ ಕೆಲಸವು ಮಾಡಲಾಗಿರುತ್ತದೆ.

ತುಮಕೂರು ಶಾಖಾ ನಾಲಾ ಪ್ರಾರಂಭದಿಂದ 125ನೇ ಕಿ.ಮೀ.ವರೆಗೆ ಲೈನಿಂಗ್ ಕಾಮಗಾರಿಗಳು ಕೈಗೊಳ್ಳಲಾಗಿರುತ್ತದೆ. 126 ರಿಂದ 187 ರವೆಗಿನ ಕಿಮೀ. ರೀಚ್‌ಗಳಲ್ಲಿ